ನನಗೆ ಸಿಡಿಲು ಬಡಿದಂತಾಗಿತ್ತು. ನನ್ನ ಗಂಟಲಿನಿಂದ ಮಾತೇ ಹೊರಡಲಿಲ್ಲ.

'ಯಾಕೆ? ನನ್ನ ಮಾತಿನಿಂದ ಶಾಕ್ ಆಯ್ತಾ ನಿಮಗೆ?' ಮತ್ತೆ ಅವಳೇ ಕೇಳಿದಳು. ನಾನು,

'ಸುಲೋಚನಾ ಅದೂ... ನಾನು... ಅವನೂ...' ತೊದಲಿದ್ದೆ.

'ಸಮರ್ಥನೆ ಕೊಡುವುದಕ್ಕೆ ಬರ್ಬೇಡಿ. ನಾನಾಗ್ಲೇ ನಿಮ್ಮ ಮೊಬೈಲ್‌ನ ವಾಟ್ಸಾಪ್ ಚ್ಯಾಟ್‌ನಲ್ಲಿ ನಿಮ್ಮ ಹಾಗೂ ದಿನಕರನ ಮೆಸೇಜ್ ಓದಿದ್ದೇನೆ' ಎಂದು ಅವಳು ಥಟ್ಟನೆ ನುಡಿದಾಗ ನಾನು ಸಂಪೂರ್ಣವಾಗಿ ಬೆವೆತುಹೋಗಿದ್ದೆ.

'ಆದ್ರೂ... ಅದು...' ಈಗಾಗಲೇ ಅವಳ ಮುಂದೆ ಸಂಪೂರ್ಣ ಬೆತ್ತಲಾಗಿದ್ದ ನಾನು ಮುಂದಿನ ಪರಿಣಾಮದ ಬಗ್ಗೆ ಭಯಗೊಂಡು ಅದರಿಂದ ತಪ್ಪಿಸಿಕೊಳ್ಳುವ ಆಲೋಚನೆ ಮಾಡುತ್ತಿದ್ದೆ.

'ಆದ್ರೂ ನೀವು, ನಿಮ್ಮನ್ನು ಗಂಡೂಂತ ಸಮರ್ಥಿಸಿಕೊಳ್ತೀರಾ?... ಇಷ್ಟಾದ ಮೇಲೂ ನಾನು ಮತ್ತೆ ಮೋಸ ಹೋಗ್ತೇನೇಂತ ನೀವಂದುಕೊಂಡಿದ್ದೀರಾ ಹೇಗೆ?... ಅಂತೂ ನನಗೆ ಮೋಸ ಮಾಡಿದ್ರಲ್ವಾ... ನೀವು ಎಲ್ಲವನ್ನು ಮುಚ್ಚಿಟ್ಟು ತಾನು ಮದುವೆಯಾಗಿರುವವನು, ಒಂದು ಮಗುವಿನ ತಂದೆ ಎಂದು ಸಮಾಜದಲ್ಲಿ ಮೆರೆದಾಡುತ್ತಾ, ಕಾಮದಾಸೆಗಾಗಿ ಜೊಲ್ಲು ಸುರಿಸುತ್ತಾ ನಿಮ್ಮ ಹಿಂದಿನಿಂದ ಬರುವ ಪುರುಷರ ಜೊತೆ ರಾಸಲೀಲೆಯಾಡುತ್ತಾ ಸುಖವಾಗಿರಬಲ್ಲಿರಿ. ಆದ್ರೆ ನಾನು?... ನಾನೇನು ಮಾಡ್ಬೇಕು... ಕೈ ಹಿಡಿದ ಪತಿ ಹೆಣ್ಣಿಗ, ಅದನ್ನು ತೋರಿಸಿಕೊಳ್ಳಲಾಗದೆ ಒಳಗೆ ಅನುಭವಿಸಲೂ ಆಗದೆ ಈ ನಾಲ್ಕು ಗೋಡೆಗಳ ನಡುವೆಯೇ ನನ್ನ ಆಸೆ ಆಕಾಂಕ್ಷೆಗಳನ್ನೆಲ್ಲ ಬಲಿಕೊಟ್ಟು ನಾನು ಇಲ್ಲೇ ಸಮಾಧಿಯಾಗ್ಬೇಕು ಅಂತೀರಾ?... ಹೇಳಿ?...' ಅವಳು ಗಟ್ಟಿಸಿ ಕೇಳುವಾಗ, ನನ್ನ ಮೈಯಲ್ಲಿನ ಶಕ್ತಿಯೆಲ್ಲವೂ ಸೋರಿ ಹೋಗಿ ಭೂಮಿಯಡಿ ಸೇರಿಕೊಂಡಂತಾಗಿತ್ತು. ಅವಳು ಅವಳ ಮನಸ್ಸಿಗಾದ ಆಘಾತ, ನೋವು ತಡೆಯಲಾಗದೆ ನನ್ನನ್ನು ಬಾಯಿಗೆ ಬಂದಂತೆ ಬೈದು ತನಗಾದ ಕೋಪ, ಅಸಮಾಧಾನವನ್ನು ಹೊರಹಾಕುತ್ತಿದ್ದರೆ, ನಾನು ಏನೊಂದೂ ಮಾತನಾಡದೆ ಮೌನ ಶಿಲೆಯಾಗಿದ್ದೆ. ಅವಳು ಮತ್ತೆ ಮತ್ತೆ ಪ್ರಶ್ನಿಸುತ್ತಿದ್ದರೂ ಯಾವುದಕ್ಕೂ ಉತ್ತರಿಸದೆ ಮೌನವಾಗಿ ಬಿದ್ದುಕೊಂಡಿದ್ದ ನನ್ನನ್ನು ಕಂಡು ಅಸಹನೆಯಿಂದ ಕಣ್ಣೀರು ಸುರಿಸುತ್ತಾ ಅಲ್ಲಿಂದ ಎದ್ದು ಹೋಗಿದ್ದಳು. ಅವಳಿಗಿದ್ಯಾವ ಪ್ರಮಾಣದಲ್ಲಿ ನೋವಾಗಿತ್ತೆಂಬುವುದು ಅವಳ ಮಾತಿನಿಂದಲೇ ನನಗರ್ಥವಾಗಿತ್ತು. ಅವಳಿಗೆಂತಾ ದ್ರೋಹ ಬಗೆದೆಯೆನ್ನುವುದು ನನಗರಿವಾಗಿತ್ತು. ನನ್ನ ಕಣ್ಣಂಚಿನಿಂದ ಜಾರಿದ ಕಂಬನಿಯ ಬಿಂದುಗಳು ಆ ರಾತ್ರಿಯಿಡೀ ನನ್ನ ತಲೆದಿಂಬನ್ನು ತೋಯಿಸಿದ್ದವು.

ಮರುದಿನದಿಂದ ಅವಳು ನನಗೆ ಮುಖಕ್ಕೆ ಮುಖಕೊಟ್ಟು ಮಾತನಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಳು. ಒಂದು ಸಂಜೆ ನಾನೇ ಅವಳನ್ನು ತಡೆದು ನಿಲ್ಲಿಸಿ



ಸಮಾಧಾನವಾಗಿ ಮಾತನಾಡಿದ್ದೆ.

'ನಿನಗೆ ದ್ರೋಹ ಬಗೆಯುವ ಯಾವ ಉದ್ದೇಶವೂ ನನಗಿರಲಿಲ್ಲ. ನಾನು ತುಂಬಾ ಸಮಯ ಮದುವೆ ಬೇಡವೆಂದು ಅವಾಯ್ಡ್ ಮಾಡುತ್ತಾ ಬಂದೆನಾದರೂ ಅಮ್ಮ, ಅಕ್ಕ, ನನ್ನ ನೆಂಟರ ಒತ್ತಾಯಕ್ಕೆ ಕಟ್ಟುಬಿದ್ದು ಮದುವೆಯಾಗುವುದು ಅನಿವಾರ್ಯವಾಯಿತು. ಮನೆಯವರ‍್ಯಾರ ಮುಂದೂ ನನ್ನ ಮನಸ್ಥಿತಿಯ ಬಗೆಗೆ ಹೇಳಿಕೊಳ್ಳುವ ಧೈರ್ಯ ನನ್ನಲಿರಲಿಲ್ಲ. ಎಲ್ಲರನ್ನೂ ತೊರೆದು ಯಾವುದೋ ಕಾಣದ ಊರಲ್ಲಿ ಬೀದಿಪಾಲಾಗೋದು ಕೂಡಾ ನನಗೆ ಬೇಕಾಗಿರಲಿಲ್ಲ. ಒಟ್ಟಿನಲ್ಲಿ ಇಂತಹುದೊಂದು ಹುಟ್ಟೇ ಸರಿಯಲ್ಲ. ಈ ರೀತಿ ಹುಟ್ಟಿದವರ‍್ಯಾರಿಗೂ ಮರಿಯಾದೆಯೇ ಇಲ್ಲ ಎನ್ನುವಂತಹ ಈ ಸಮಾಜದಲ್ಲಿ ನಾನಿನ್ನೇನು ಮಾಡಬೇಕಿತ್ತು ನೀನೇ ಹೇಳು?... ನನ್ನದೇ